ಅಧ್ಯಕ್ಷರು : ಸಾಕು, ಈ ವಿಷಯದ ಬಗ್ಗೆ ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ. ಮುಂದೆ ವಿತ್ತೀಯ ಕಾರ್ಯಕಲಾಪದ ಬಗ್ಗೆ ಚರ್ಚೆಯನ್ನು ನಾವು ಪ್ರಾರಂಭ ಮಾಡೋಣ. ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ. ರೇವಣ್ಣನವರೆ, ಈ ವಿಷಯಕ್ಕೆ ಚರ್ಚೆ ಸಾಕು. ನಾನು ಸದಸ್ಯರ ಗಮನವನ್ನು ಸೆಳೆಯುತ್ತಿದ್ದೇನೆ. ಇದು ಕಾಲಿಂಗ್ ಅಟೆನ್‌ಷನ್. ಈ ರೀತಿ ನೀವು ಮಾಡುವುದಾದರೆ ಸರಿಯಲ್ಲ, ನಾನು ಸದನವನ್ನು ಹೇಗೆ ನಡೆಸಬೇಕು? ಎಲ್ಲದಕ್ಕೂ ನಿಮಗೆ ಇದೇ ರೀತಿ ಉತ್ತರವನ್ನು ಕೊಡಬೇಕೆಂದರೆ ಆಗುವುದಿಲ್ಲ. ನೀವು ಧರಣಿ ಮಾಡುವ ಅವಶ್ಯಕತೆ ಇಲ್ಲ.

(ಈ ಹಂತದಲ್ಲಿ ಜೆಡಿ(ಎಸ್) ಸದಸ್ಯರುಗಳು ಬಾವಿಗೆ ಬಂದರು)

ಇದು ಗಮನ ಸೆಳೆಯುವ ಸೂಚನೆ. ಅಪ್ಪಚ್ಚುರಂಜನ್ ನಾನು ಹೇಳುತ್ತೇನೆ, ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಅವರು ಹೇಳುವವರೆಗೆ ನಾನು ಸುಮ್ಮನೆ ಇದ್ದೆ, ನಾನು ಹೇಳುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಇದನ್ನು ನೀವು ನಿಯಮ 69 ರಲ್ಲಿ ಕಳುಹಿಸಿಕೊಡಿ. ಡಿಟೇಲ್ ಆಗಿ ಚರ್ಚೆಯನ್ನು ಮಾಡೋಣ. ಗಮನ ಸೆಳೆಯುವ ಸೂಚನೆಯಲ್ಲಿ ನಾನು ಅವಕಾಶವನ್ನು ಕೊಟ್ಟರೆ ಮಾತ್ರ ನೀವು ಸ್ಪಷ್ಟೀಕರಣವನ್ನು ಕೇಳಬಹುದು. ಇದರಲ್ಲಿ ಇಷ್ಟೊಂದು ಡಿಟೇಲ್ ಆಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಅವರು ಉತ್ತರವನ್ನು ಕೊಟ್ಟಿದ್ದಾರೆ, ನೀವು ಸ್ಪಷ್ಟೀಕರಣವನ್ನು ಕೇಳಿದ್ದೀರಿ, ಮತ್ತೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಪದೇ ಪದೇ ಇದನ್ನು ಚರ್ಚೆ ಮಾಡುವಂಥ ಅವಶ್ಯಕತೆಯಿಲ್ಲ. ಬೇರೆ ರೀತಿಯಲ್ಲಿ ಇದಕ್ಕೆ ನೀವು ಅವಕಾಶವನ್ನು ಕೇಳಿ ನೋಟೀಸ್ ಕೊಟ್ಟರೆ ನಾನು ಅವಕಾಶವನ್ನು ಕೊಡುತ್ತೇನೆ. ಇದೇ ಒಂದು ವಿಷಯಕ್ಕೆ ಇಡೀ ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನೀವು ಅದನ್ನೇ ಹೇಳುವುದು, ಅವರೂ ಅದನ್ನೇ ಹೇಳುವುದು. ಮಾನ್ಯ ಉದಾಸಿಯವರೆ, ಕೊನೆಯದಾಗಿ ಹೇಳಿಬಿಡಿ. ಮಾನ್ಯ ಅಪ್ಪಚ್ಚುರಂಜನ್‌ರವರೆ ನೀವು ಸುಮ್ಮನೆ ಇರಿ.

ಶ್ರೀ ಸಿ. ಎಂ. ಉದಾಸಿ : ನೀವು ಒಂದು ಸಮಯವನ್ನು ಗೊತ್ತುಮಾಡಬಹುದು. ಸನ್ಮಾನ್ಯ ರೇವಣ್ಣನವರು ಮತ್ತು ನಾನು ಮತ್ತು ಸಹಿ ಮಾಡಿದ ಎಲ್ಲಾ ಮಾನ್ಯ ಸದಸ್ಯರುಗಳು ಬರಲಿ.

ಅಧ್ಯಕ್ಷರು : ಇದರ ಬಗ್ಗೆ ಮತ್ತೆ ಡಿಟೇಲ್ ಆಗಿ ಚರ್ಚೆ ಮಾಡುವ ಅವಶ್ಯಕತೆ ಇದ್ದರೆ ನೀವು ಬೇರೆ ನೋಟೀಸ್ ಕೊಡಿ. ನಾನು ಅವಕಾಶವನ್ನು ಕೊಡುತ್ತೇನೆ. ಇದು ಗಮನ ಸೆಳೆಯುವ ಸೂಚನೆ. ನಿಯಮ 73 ರ ಪ್ರಕಾರ ಇವತ್ತು ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂತಹ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನು ಮಾಡತಕ್ಕದ್ದಲ್ಲ. ಇದು ಗಮನ ಸೆಳೆಯುವ ಸೂಚನೆ ಇರುವುದರಿಂದ ಇದಕ್ಕೆ ನಿರ್ದಿಷ್ಟವಾದ ಕಾಲಾವಧಿ ಇದೆ. ಅವರು ಉತ್ತರವನ್ನು ಕೊಟ್ಟಮೇಲೆ ಒಂದು ಸ್ಪಷ್ಟೀಕರಣ ಕೇಳುವುದಕ್ಕೆ ನಾನು ಅವಕಾಶ ಕೊಟ್ಟರೆ ಮಾತ್ರ ಕೇಳಬಹುದು. ಈಗ ನೀವು ಸ್ಪಷ್ಟೀಕರಣವನ್ನು ಕೇಳಿದ್ದೀರಿ. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ನೀವು ಸಮಾಧಾನವಾಗದಿದ್ದರೆ ಬೇರೆ ರೀತಿಯಲ್ಲಿ ನೋಟೀಸ್‌ನ್ನು ಕೊಡಿ. ರೂಲ್ 69 ನಲ್ಲಿ

ಕೊಡಿ. ಡಿಟೇಲ್ ಆಗಿ ಚರ್ಚೆಯನ್ನು ಮಾಡೋಣ. ಇಲ್ಲಿಗೆ ನಾನು ಈ ವಿಷಯವನ್ನು ಮುಕ್ತಾಯಗೊಳಿಸಿದ್ದೇನೆ. ಮುಂದಿನ ಚರ್ಚೆಗೆ ನಾನು ಅವಕಾಶವನ್ನು ಕೊಡುತ್ತೇನೆ. ವಿತ್ತೀಯ ಕಾರ್ಯಕಲಾಪಗಳು ಪ್ರಾರಂಭವಾಗಬೇಕು. ಮಾನ್ಯ ಸಿದ್ಧರಾಮಯ್ಯನವರು.

ಶ್ರೀ ಸಿದ್ಧರಾಮಯ್ಯನವರು : ಆರ್ಡರ್‌ನಲ್ಲಿ ಇಲ್ಲವಲ್ಲ.

ಅಧ್ಯಕ್ಷರು : ಮಾಡಿಸುತ್ತೇನೆ, ನಡೆಯಿರಿ. ಮಾನ್ಯ ಜೆಡಿ(ಎಸ್) ಸದಸ್ಯರು ನಿಮ್ಮ ಸ್ಥಾನಕ್ಕೆ ಹೋಗಿ. ಈ ರೀತಿ ಧರಣಿ ಮಾಡುವುದು ಸರಿಯಲ್ಲ. ಇದರ ಬಗ್ಗೆ ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ನೀವು ಬೇರೆ ರೀತಿಯ ನೋಟೀಸ್ ಕೊಡಿ. ಇದಕ್ಕೆ ಇನ್ನು ಹೆಚ್ಚಿನ ಚರ್ಚೆಗೆ ಅವಕಾಶವನ್ನು ನಾನು ಮಾಡಿ ಕೊಡುತ್ತೇನೆ. ರೂಲ್ 69 ರಲ್ಲಿ ಕೊಡಿ. ನಾನು ಅವಕಾಶವನ್ನು ಕೊಡುತ್ತೇನೆ. ಗಮನ ಸೆಳೆಯುವ ಸೂಚನೆ ಬಗ್ಗೆ ನೀವು ಇದೇ ರೀತಿ ಚರ್ಚೆ ಮಾಡುವುದಾದರೆ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ. ನೀವು ಈಗ ಒಂದು ಸ್ಪಷ್ಟೀಕರಣವನ್ನು ಕೇಳಿ. ಆಯಿತು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು, ಆ sub-divisionನ್ನು ತೆಗೆಯಬೇಕಾದರೆ, ಯಾರದೇ ಪ್ರಸ್ತಾವನೆ ಇಲ್ಲದೆ ತೆಗೆದಿದ್ದಾರೆಂದು ಒಂದು ಮೆಸೇಜ್‌ನ್ನು ಕೊಟ್ಟರು. ಇವತ್ತು ಈ sub-divisionನ್ನು ತೆಗೆಯಬೇಕಾದರೆ, ಇದರ ಬಗ್ಗೆ ಯಾರ ಪ್ರಸ್ತಾವನೆ ಇತ್ತೆಂದು ತಾವು ದಯಮಾಡಿ ಹೇಳಬೇಕು. Chief Engineerರವರು ಪ್ರಸ್ತಾವನೆ ಏನಿದೆ ಎಂದು ಸಭೆಯ ಮುಂದೆ ಓದುವುದಕ್ಕೆ ತಾವು ದಯಮಾಡಿ ಹೇಳಬೇಕು. Chief Engineer ರವರು ಏನು ಹೇಳಿದ್ದಾರೆ. ನಾನು ಈ ಬಗ್ಗೆ ಒಂದು ನಿಮಿಷ ಹೇಳುತ್ತೇನೆ. ತಾವು ಸಭೆಯನ್ನು ಬೇರೆ ದಾರಿಗೆ ತರುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣವನ್ನು ಹೇಳುತ್ತಾರೆ. ಲಾಸ್ಟ್‌ನಲ್ಲಿ ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಈ sub-divisionನ್ನು ಶಿವಮೊಗ್ಗದಲ್ಲಿ ತೆರೆಯುವುದಕ್ಕೆ ಇದರಲ್ಲಿ ಯಾರ ಪ್ರಸ್ತಾವನೆ ಏನಿದೆ? ಚನ್ನರಾಯಪಟ್ಟಣ sub-divisionನ್ನು ತೆಗೆಯಬೇಕೆಂದು ಏನಾದರೂ ಪ್ರಸ್ತಾವನೆ ಇದೆಯೇ? ಇಲ್ಲದಿದ್ದರೆ ತೆಗೆಯಿರಿ, ಬೇಕಾದರೆ ತಾವು ಇದನ್ನು ಓದಿ.

ಶ್ರೀ ಎಂ. ಶ್ರೀನಿವಾಸ : ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು : ಮಾನ್ಯ ಶ್ರೀನಿವಾಸ್‌ರವರೆ, ಅವರು ಉತ್ತರವನ್ನು ಹೇಳುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಶ್ರೀನಿವಾಸ್‌ರವರಿಗೆ ಜಮೀನಿಗೆ ಬೇಲಿ ಹಾಕುವುದರ ಬಗ್ಗೆ ಗೊತ್ತಿದೆಯೇ ಹೊರತೂ ಸಬ್ ಡಿವಿಜನ್ ವಿಷಯ ಎಂದರೆ ಅವರಿಗೆ ಏನು ಗೊತ್ತಿದೆ?

ಅಧ್ಯಕ್ಷರು : ಮಾನ್ಯ ಉದಾಸಿಯವರೆ, ತಾವು ಕೊನೆಯದಾಗಿ ಹೇಳಿಬಿಡಿ. ಸದನದ ಬಾವಿಯಲ್ಲಿರುವ ಸದಸ್ಯರು ತಾವುಗಳು ದಯಮಾಡಿ ತಮ್ಮ ಸ್ಥಾನಗಳಿಗೆ ತೆರಳಿ. ಮಾನ್ಯ ಬಾಲಕೃಷ್ಣರವರೆ, ತಾವು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಸಿ. ಎಂ. ಉದಾಸಿ : ನಾನು ಸನ್ಮಾನ್ಯ ರೇವಣ್ಣನವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 45 ವರ್ಷಗಳಿಂದ ಸ್ಥಾಪಿತವಾಗಿರುವಂತಹ ನಿರಂತರವಾಗಿ ನಡೆಯುತ್ತಿರುವಂತಹ sub-division ನ್ನು ವರ್ಗಾವಣೆ ಮಾಡಬೇಕಾಗಿರುವಂತಹ...

ಅಧ್ಯಕ್ಷರು : ಈ ಒಂದು ವಿಯದ ಬಗ್ಗೆ ಇಷ್ಟೊಂದು ಸಮಯವನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೇನೆ. ಪದೇ ಪದೇ ಅದೇ ವಿಷಯವನ್ನು ಪ್ರಸ್ತಾಪ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ತಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ರೂಲ್ 69 ರ ಪ್ರಕಾರ ತಾವು ನೋಟೀಸ್‌ನ್ನು ಕೊಡಿ, ಇದರ ಬಗ್ಗೆ ಇನ್ನು ಹೆಚ್ಚಿನ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಸದನದ ಮುಂದಿನ ಕಾರ್ಯಕಲಾಪಗಳಿಗೆ ತಾವು ಅಡ್ಡಿ ಮಾಡಬಾರದು, ಅದು ಸಾಧ್ಯವಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಇದನ್ನು ದುರುದ್ದೇಶದಿಂದ ಮಾಡುತ್ತಿದ್ದಾರೆಯೇ ಹೊರತು,....

ಅಧ್ಯಕ್ಷರು : ಇದನ್ನು ತಾವು ಹೇಳಿದ್ದೀರಲ್ಲಾ, ತಾವು ಹೇಳಿದ್ದೀರಿ, ಅವರು ನಿರ್ಣಯವನ್ನು ಕೈಗೊಂಡಿದ್ದಾರೆ. ಮತ್ತೆ ತಾವು ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡುವುದಾದರೆ ರೂಲ್ 69 ಪ್ರಕಾರ ತಾವು ನೋಟೀಸ್‌ನ್ನು ಕೊಡಿ.

ಶ್ರೀ ಸಿ. ಎಂ. ಉದಾಸಿ : ಅವರು ಯಾವ ಉದ್ದೇಶದಿಂದ ಮಾಡಿದರು ಎಂದು ಅವರಿಗೆ ಗೊತ್ತಾಗಿದೆ.

ಅಧ್ಯಕ್ಷರು : ಮತ್ತೆ ನಾನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ತಾವು ತಮ್ಮ ಕಛೇರಿಗೆ ಕರೆಸಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ತಾವು ತಮ್ಮ ಸ್ಥಾನಗಳಿಗೆ ದಯಮಾಡಿ ಹೋಗಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಜೆಡಿಎಸ್ ಪಕ್ಷದ ಸದಸ್ಯರುಗಳು ತಮ್ಮ ಗಳ ಸ್ಥಾನಗಳಿಗೆ ಹೋದರು)

ಅಧ್ಯಕ್ಷರು : ಈ ವಿಷಯದ ಬಗ್ಗೆ ಚರ್ಚೆಯನ್ನು ನಾನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದರ ಬಗ್ಗೆ ತಾವು ಏನು ತೀರ್ಮಾನ ಮಾಡಿದ್ದೀರಿ?

ಅಧ್ಯಕ್ಷರು : ತಾವು ರೂಲ್ 69 ರ ಮೇರೆ ಕೊಡಿ. ನಾನು ಇದರ ಬಗ್ಗೆ ಹೆಚ್ಚಿನ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಓಕೆ ಸಾರ್.

ಅಧ್ಯಕ್ಷರು : ಈಗ ಮುಂದಿನ ಕಾರ್ಯಕಲಾಪ, ವಿತ್ತೀಯ ಕಾರ್ಯಕಲಾಪಗಳು, 2008-09 ನೇ